# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಸಂಖ್ಯೆ: ಕೆಇಎನ್‌ಡಿಸಿಪಿಎಸ್‌ಸಿ/ಬಿ93/35989/2020-21/ ೮೪೫-೧

ನಿಗಮ ಕಾರ್ಯಾಲಯ
ಕಾವೇರಿ ಭವನ, ಬೆಂಗಳೂರು.
ದಿನಾಂಕ: 12 MAY 2020

## ಸುತ್ತೋಲೆ

ವಿಷಯ: ಕವಿಪ್ರನಿನಿ/ವಿಸಕಂಗಳ ಅಧಿಕಾರಿ/ನೌಕರರು ಸೇವೆಗೆ ಸೇರುವಾಗ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸಲ್ಲಿಸಬೇಕಾದ ಅನುಬಂಧ-1ರಲ್ಲಿ ಪೂರ್ಣ ಮಾಹಿತಿಯನ್ನು ನಮೂದಿಸುವ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ: 05.07.2007 & 21.08.2007
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17/ಸಿವೈಸ್-12 ದಿನಾಂಕ: 14.12.2016

ಉಲ್ಲೇಖ 1 ರಲ್ಲಿರುವ ನಿಗಮದ ಆದೇಶದಲ್ಲಿ, ಕವಿಪ್ರನಿನಿ/ವಿಸಕಂಗಳಲ್ಲಿ ದಿನಾಂಕ:01-04-2006ರಂದು ಮತ್ತು ನಂತರ ಸೇವೆಗೆ ಸೇರುವ ಅಧಿಕಾರಿ/ನೌಕರರಿಗೆ ಅನ್ವಯವಾಗುವಂತೆ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಜಾರಿಗೊಳಿಸಿದ್ದು, ಸದರಿ ಅಧಿಕಾರಿ/ನೌಕರರು ಸೇವೆಗೆ ಸೇರಿದ ಕೂಡಲೇ ತಮ್ಮ ಹೆಸರು, ಪದನಾಮ, ವೇತನ ಶ್ರೇಣಿ, ಜನ್ಮ ದಿನಾಂಕ, ಸಂಚಿತ ನಿಧಿಗೆ ನಾಮ ನಿರ್ದೇಶಿತರು, ನಾಮ ನಿರ್ದೇಶಿತರೊಂದಿಗೆ ಅಧಿಕಾರಿ/ನೌಕರನಿಗಿರುವ ಸಂಬಂಧದ ವಿವರಗಳನ್ನು ನಿಗದಿತ ನಮೂನೆಯ ಅನುಬಂಧ-1ರಲ್ಲಿ ಭರ್ತಿ ಮಾಡಿರುವುದನ್ನು, ವೇತನ ಬಟವಾಡೆ ಮಾಡುವ ಅಧಿಕಾರಿಯು ಖಚಿತಪಡಿಸಿಕೊಂಡ ನಂತರ ದೃಢೀಕರಿಸಿ, ಖಾಯಂ ವಿಶ್ರಾಂತಿ ವೇತನ ಖಾತೆ ಸಂಖ್ಯೆ (PPAN) ಯನ್ನು ನೀಡಲು ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕಕ್ಕೆ (KENDCPS Cell) ಸಲ್ಲಿಸಬೇಕೆಂದು ತಿಳಿಸಲಾಗಿರುತ್ತದೆ.

ಆದಾಗ್ಯೂ ಕವಿಪ್ರನಿನಿ/ವಿಸಕಂಗಳ ಕೆಲವು ವಿಭಾಗಗಳಿಂದ ಸಲ್ಲಿಸಲಾದ ಅಧಿಕಾರಿ/ನೌಕರರ ಅನುಬಂಧ-1ರಲ್ಲಿ ಗಮನಿಸಲಾದ ಈ ಕೆಳಕಂಡ ನ್ಯೂನ್ಯತೆಗಳನ್ನು ಗಮನಿಸಲಾಗಿದೆ. ಇದರಿಂದ ಅನಗತ್ಯ ಪತ್ರ ವ್ಯವಹಾರಕ್ಕೆ ಅನುವು ಮಾಡಿಕೊಡುತ್ತಿದೆ ಮತ್ತು PPA ಸಂಖ್ಯೆ ನೀಡಲು ಸಹಾ ವಿಳಂಬ ಆಗುತ್ತಿದೆ.

**ನ್ಯೂನ್ಯತೆಗಳು/ತೆಗೆದುಕೊಳ್ಳಬೇಕಾದ ಕ್ರಮ:**

1) ಕೆಲವು ಪ್ರಕರಣಗಳಲ್ಲಿ ನೇಮಕಾತಿ ಆದೇಶದಲ್ಲಿ ಹಾಗೂ ಅನುಬಂಧ-1ರಲ್ಲಿನ ಹೆಸರು ಮೂಲ ದಾಖಲೆಯಾದ SSLC ಅಂಕಪಟ್ಟಿಯಲ್ಲಿರುವ ಹೆಸರಿಗೆ ತಾಳೆಯಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.
2) ಅನುಬಂಧ-1ರಲ್ಲಿ ಅಧಿಕಾರಿ/ನೌಕರರರು ಸೇವೆಗೆ ಸೇರಿದ ದಿನಾಂಕವನ್ನು ತಿದ್ದುಪಡಿ ಮಾಡಿದಲ್ಲಿ ಸಂಬಂಧಪಟ್ಟ ವೇತನ ಬಟವಾಡೆ ಮಾಡುವ ಅಧಿಕಾರಿಯವರು ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದೃಢೀಕರಿಸಿ ಸಲ್ಲಿಸುವುದು.
3) ನಾಮನಿರ್ದೇಶಿತರ ಜನ್ಮ ದಿನಾಂಕವನ್ನು DD/MM/YYYY ನಮೂನೆಯಲ್ಲಿಯೇ ನೀಡುವುದು.
4) ನಾಮನಿರ್ದೇಶಿತರಿಗೆ ಹಂಚಿಕೆ ಮಾಡಬೇಕಾದ ಸಂಚಿತ ನಿಧಿಯ ಶೇಕಡವಾರು ಭಾಗವನ್ನು ಸ್ಪಷ್ಟವಾಗಿ ನಮೂದಿಸುವುದು.

ಆದ್ದರಿಂದ KENDCPS Cellಗೆ ಸಲ್ಲಿಕೆಯಾಗುವ ಅಧಿಕಾರಿ/ನೌಕರರ ಅನುಬಂಧ-1 ಶಾಶ್ವತ ದಾಖಲೆಯಾಗಿರುವುದರಿಂದ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಯವರು ಮೇಲಿನ ಸೂಚನೆಗಳನ್ನು ಪಾಲಿಸಿ ಸರಿಯಾದ ಮಾಹಿತಿಯನ್ನು ನೀಡುವಂತೆ ಹಾಗೂ ನ್ಯೂನ್ಯತೆಗಳನ್ನು ಗಮನಿಸಿದಲ್ಲಿ ಸರಿಪಡಿಸಿ ತಮ್ಮ ಸಹಿ ಮತ್ತು ಕಛೇರಿ ಮುದ್ರೆಯೊಂದಿಗೆ ದೃಢೀಕರಿಸಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಆರ್ಥಿಕ ಸಲಹೆಗಾರರು
ಎನ್‌ಡಿಸಿಪಿಎಸ್

ಪ್ರತಿಗಳು ಮಾಹಿತಿಗಾಗಿ:

1. ಆರ್ಥಿಕ ಸಲಹೆಗಾರರು (ಲೆ&ಸಂ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ&ವಾ) ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಚಾವಿಸನಿನಿ, ಹಿನಕಲ್ ರಸ್ತೆ, ಮೈಸೂರು.
4. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಮವಿಸಕಂ, ಮಂಗಳೂರು.
5. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಗುವಿಸಕಂ, ಗುಲಬರ್ಗ.
6. ಮುಖ್ಯ ಆರ್ಥಿಕ ಅಧಿಕಾರಿ, ನಿಗಮ ಕಾರ್ಯಾಲಯ, ಹುವಿಸಕಂ, ನವನಗರ ಹುಬ್ಬಳ್ಳಿ.
7. ಜಂಟಿ ನಿರ್ದೇಶಕರು, ಪಿಸಿಕೆಎಲ್, 5ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
8. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ/ವಿಸಕಂಗಳು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
9. ಅಧೀಕ್ಷಕ ಇಂಜಿನಿಯರ್(ವಿ), ಐಟಿ ಮತ್ತು ಎಂಐಎಸ್, ಕವಿಪ್ರನಿನಿ ಕಾವೇರಿಭವನ ಬೆಂಗಳೂರು ರವರಿಗೆ ಅಂತರ್ಜಾಲದಲ್ಲಿ ಪ್ರಕಟಿಸಲು.